ಸರಸ್ವತಿಯಲ್ಲಿ ಅವಳು ಯಾವ ಕುಂದೂ ತೆಗೆಯುವಂತಿರಲಿಲ್ಲ. ಮನೆಯವರಂತೆ ಮಕ್ಕಳ ಬಗ್ಗೆ ಕಾಳಜಿ ತೋರುತ್ತಿದ್ದಳು. ಗಂಗಾಧರನಿಗೆ ಯಾವುದೋ ದುಡ್ಡು ಬಂದಾಗ ಹಟ ಮಾಡಿ ಮನೆಗೆ ಸೋಫಾಸೆಟ್ ಕೊಂಡುಕೊಳ್ಳುವಂತೆ ಮಾಡಿದ್ದಳು. ಕಿಟಕಿಗಳಿಗೆ, ಬಾಗಿಲುಗಳಿಗೆ ಪರದೆ ಹೊಲಿಸಿ ತಂದಿದ್ದಳು. ಗಂಗಾಧರನ ಮನೆಯಲ್ಲಿ ಮೂರು ರೂಮುಗಳಿದ್ದವು. ಒಂದು ಡಬ್ಬಲ್ ಕಾಟ್, ಒಂದು ಸಿಂಗಲ್ ಕಾಟ್ ಇತ್ತು. ಸರಸ್ವತಿ ಆಸಕ್ತಿ ವಹಿಸಿದ್ದರಿಂದ ಮನೆಗೆ ಎರಡು ದಿವಾನ್‌ಗಳು ಬಂದವು. ಗಂಗಾಧರನ ಜಮೀನಿನಿಂದ ಹಣ ಬಂದಾಗ ಮನೆ ಭೋಗ್ಯ ಹಾಕಿಕೊಳ್ಳಲು ಒತ್ತಾಯಿಸಿದ್ದಳು.

ಸರಸ್ವತಿ ಶ್ರೀಮಂತ ಕುಟುಂಬದ ಹೆಣ್ಣು ಮಗಳು. ಮೈಸೂರಿನಲ್ಲಿ ಅವಳ ಹೆಸರಿನಲ್ಲಿ ಮನೆ ಇತ್ತು. ಅದರ ಬಾಡಿಗೆ ಪ್ರತಿ ತಿಂಗಳೂ ಹತ್ತು ಸಾವಿರ ಬರುತ್ತಿತ್ತು. ಅವಳು ಮನೆ ಬಾಡಿಗೆಗೆ ಕೊಟ್ಟು ಎಂಟು ವರ್ಷಗಳಾಗಿದ್ದವು.

ಒಂದು ರಾತ್ರಿ ಊಟಕ್ಕೆ ಕುಳಿತಾಗ ಸರಸ್ವತಿ ಗಂಗಾಧರನನ್ನು ಕೇಳಿದ್ದಳು. 'ನಿಮಗೆ ಸ್ವಂತ ಮನೆ ಮಾಡುವ ಐಡಿಯಾ ಇಲ್ವಾ?'

'ಐಡಿಯಾ ಇದೆ. ಆದರೆ ಹಣ ಇಲ್ಲ'.

'ಹಿಂದಿನ ಬೀದಿಯಲ್ಲಿ ಲಾಯರ್ ರಂಗಪ್ಪ ಮನೆ ಮಾರ್‍ತಿದ್ದಾರೆ. ಡ್ಯೂಪ್ಲೆಕ್ಸ್ ಹೌಸ್, ಕೆಳಗಡೆ ಮೂರು ರೂಮುಗಳಿವೆ. ಹಾಲ್, ಪೋರ್ಟಿಕೊ, ಅಡುಗೆಮನೆ, ಊಟದ ಮನೆ ಇದೆ. ಮೇಲುಗಡೆ ಹಾಲ್. ಎರಡು ರೂಮುಗಳಿವೆ. ಚಿಕ್ಕ ಅಡುಗೆ ಮನೆ, ಟಾಯ್ಲೆಟ್ ಇದೆ. ಅರವತ್ತು ಲಕ್ಷ ಹೇಳ್ತಿದ್ದಾರೆ. ಬ್ಯಾಂಕ್‌ನಲ್ಲಿ ಲೋನ್ ಸಿಗುತ್ತದೆ. ಕೊಂಡುಕೊಳ್ಳಿ'.

'ನನಗೆ ಧೈರ್ಯವಿಲ್ಲ ಬೇಡ ಮೇಡಂ'.

'ನಿಮ್ಮ ಹಳ್ಳಿಯಲ್ಲಿರುವ ಜಮೀನು ಮಾರಿಬಿಡಿ. ಉಳಿದ ಹಣದ ವ್ಯವಸ್ಥೆ ನಾನು ಮಾಡ್ತೇನೆ'.

ಶಾರದಾಗೆ ಮನೆಯ ವ್ಯವಹಾರ ಅರ್ಥವಾಗಿರಲಿಲ್ಲ. ಗಂಗಾಧರ ಮನೆ ಕೊಂಡುಕೊಂಡಿದ್ದ. ಸರಸ್ವತಿಯೇ ನಿಂತು ಮನೆಯ ಮೇಲೆ ಎರಡು ರೂಮು ಕಟ್ಟಿಸಿದ್ದಳು. ಕೆಳಗಿನ ಮನೆಯಲ್ಲಿ ಕೆಲವು ಬದಲಾವಣೆ ಮಾಡಿಸಿದ್ದಳು. ಗಂಗಾಧರ ವಿಜೃಂಭಣೆಯಿಂದ ಗೃಹಪ್ರವೇಶ ಮಾಡಿದ್ದ. ಮನೆಗೆ 'ಶಾರದಾ' ಎಂದು ಹೆಸರಿಟ್ಟಿದ್ದ. ಗೃಹಪ್ರವೇಶಕ್ಕೆ ಬಂದಿದ್ದ ಗಂಗಾಧರನ ತಂದೆ, ತಾಯಿ, ತಂಗಿಯರಿಗೆ ಸರಸ್ವತಿ ಭಾರೀ ಉಡುಗೊರೆ ತಂದಿದ್ದಳು. ನಗುನಗುತ್ತಾ ಉಪಚರಿಸುವ ಸರಸ್ವತಿ ಎಲ್ಲರಿಗೂ ಇಷ್ಟವಾಗಿದ್ದಳು.

ಗೃಹಪ್ರವೇಶಕ್ಕೆ ಬಂದಿದ್ದ ಪ್ರಭಾಕರ ಎಲ್ಲವನ್ನೂ ಗಮನಿಸಿದ್ದ. ಸರಸ್ವತಿಯ ಓಡಾಟ, ಅವಳ ಮೇಲ್ವಿಚಾರಣೆ ಅವನಿಗೆ ಆಶ್ಚರ್ಯ ತಂದಿತ್ತು. ಅವಳ ಶಾಲೆಯವರು ಗಂಗಾಧರ–ಸರಸ್ವತಿಯ ಬಗ್ಗೆ ಆಡುತ್ತಿದ್ದ ಮಾತುಗಳೂ ಅವನ ಕಿವಿಗೆ ಬಿದ್ದಿದ್ದವು.

ಗೃಹಪ್ರವೇಶ ಮುಗಿದು ಒಂದು ವಾರವಾದ ನಂತರ ಪ್ರಭಾಕರ ಒಂದು ಮಂಗಳವಾರ ಹನ್ನೆರಡು ಗಂಟೆಯ ಹೊತ್ತಿಗೆ ತಂಗಿಯ ಮನೆಗೆ ಬಂದಿದ್ದ. ಶಾರದಾಗೆ ಅಣ್ಣನನ್ನು ನೋಡಿ ಖುಷಿಯಾಗಿತ್ತು. ಒಂದು ಮೂಟೆ ತೆಂಗಿನಕಾಯಿ, ತರಕಾರಿ ತಂದಿದ್ದ.

'ಇದೆಲ್ಲಾ ಯಾಕೆ ತಂದೆ ಪ್ರಭಾಣ್ಣ? ಗೃಹಪ್ರವೇಶಕ್ಕೇಂತ ಕೊಟ್ಟಿದ್ದ ಸಾಮಾನೇ ಬೇಕಾದಷ್ಟಿದೆ'.

'ತಂಗಿ ಮನೆಗೆ ಬರಿಗೈಲಿ ಹೇಗಮ್ಮ ಬರೋದು?'

ಅಣ್ಣ ಬಂದನೆಂಬ ಖುಷಿಗೆ ಅವಳು ಪಾಯಸ ಮಾಡಲು ಅಣಿಯಾದಳು.

'ಮಾಡಿರುವ ಅಡುಗೆ ಸಾಕು. ನಾನು ಎರಡು ದಿನ ಇರುವುದಕ್ಕೆ ಬಂದಿದ್ದೀನಿ'.

ಶಾರದೆಗೆ ಖುಷಿಯಾಯಿತು. ಸಾಯಂಕಾಲ ಗಂಡ, ಮಕ್ಕಳು ಬರುವ ವೇಳೆಗೆ ಪಕೋಡ, ಕೇಸರಿಭಾತ್ ಮಾಡಿದಳು. ಗಂಗಾಧರ–ಪ್ರಭಾಕರನನ್ನು ಆತ್ಮೀಯವಾಗಿ ತಬ್ಬಿದ್ದ. ಮರುದಿನ ಬೆಳಿಗ್ಗೆ ಎಲ್ಲರೂ ಶಾಲೆಗೆ ಹೋದಮೇಲೆ ಪ್ರಭಾಕರ ತಂಗಿಯನ್ನು ಕೇಳಿದ್ದ. 'ನಿನ್ನ ಹತ್ತಿರ ಮಾತಾಡಬಹುದೇನಮ್ಮಾ?'

'ಏನು ವಿಚಾರ ಅಣ್ಣ?'

'ಬಾ ಕೂತ್ಕೋ ಹೇಳ್ತೀನಿ'.

ಶಾರದಾ 'ಏನು ಕೇಳಬೇಕೋ ಕೇಳು'.

'ನಿನ್ನ ಗಂಡ ಸರಸ್ವತೀನ್ನ ಮದುವೆಯಾಗಿದ್ದಾರಾ?'

'ಅಣ್ಣಾ, ಏನು ಕೇಳ್ತಿದ್ದೀಯಾ?'

'ನಾನು ಏನು ಕೇಳ್ತಿದ್ದೀನೀಂತ ನಿನಗೆ ಚೆನ್ನಾಗಿ ಗೊತ್ತಿದೆ. ಸರಸ್ವತಿ ಮೇಡಂ ನಿಮ್ಮನೆಯಲ್ಲಿರೋದು ಗೊತ್ತಿತ್ತು. ಆದರೆ ಗೃಹಪ್ರವೇಶದ ಟೈಂನಲ್ಲಿ ಆಕೆ ಯಜಮಾನಿಕೆ ನೋಡಿ ಆಶ್ಚರ್ಯವಾಯ್ತು. ಅವರ ಸ್ಕೂಲಿನವರು ಮಾತಾಡಿಕೊಳ್ತಿರೋದು ಕಿವಿಗೆ ಬಿತ್ತು. ಇದೆಲ್ಲಾ ಏನಮ್ಮಾ?'

'ಹಾಗೆಲ್ಲಾ ಏನೂ ಇಲ್ಲಣ್ಣ. ಸರಸ್ವತಿ ಮೇಡಂಗೆ ತಿಳಿವಳಿಕೆ ಹೆಚ್ಚು. ನಾವಿಬ್ಬರೂ ಪೂಜೆಗೆ ಕೂತಿದ್ದೆವಲ್ಲಾ, ಅವರಿಗೇ ನೋಡಿಕೊಳ್ಳಕ್ಕೆ ಹೇಳಿದ್ದೆವು. ಅದಕ್ಕೆ ಊಟ–ಉಪಚಾರದ ಜವಾಬ್ದಾರಿ ತೆಗೆದುಕೊಂಡಿದ್ರು ಅಷ್ಟೇ'.

'ಏನಾದ್ರಾಗ್ಲಿ ಕೊಂಚ ಹುಷಾರಾಗಿರಮ್ಮ' ಎಂದಿದ್ದ ಅಣ್ಣ.

ಅಂದಿನಿಂದ ಅವಳು ಸರಸ್ವತಿಯ ನಡವಳಿಕೆ ಗಮನಿಸಲು ಪ್ರಾರಂಭಿಸಿದ್ದಳು. ಅವಳಿಗೆ ಏನೂ ವ್ಯತ್ಯಾಸ ಕಾಣಿಸಿರಲಿಲ್ಲ. ಜೂನ್ ಕಾಲಿಟ್ಟಿತ್ತು. ಸರಸ್ವತಿಗೆ ಸಿಂಗಾನಲ್ಲೂರಿಗೆ ವರ್ಗವಾಗಿತ್ತು. ಬಸ್‌ಗಳು ಇದ್ದಿದ್ದರಿಂದ ಸರಸ್ವತಿ ಬಸ್‌ನಲ್ಲಿ ಹೋಗಿ ಬಂದು ಮಾಡುತ್ತಿದ್ದಳು.

ಶಾರದೆಗೆ ಅನುಮಾನ ಬಂದಿದ್ದು ಅವಳ ಗಂಡ ಆಫೀಸ್ ಕೆಲಸಕ್ಕೆಂದು ಮೈಸೂರಿಗೆ ಹೋದಾಗಲೆಲ್ಲಾ ಸರಸ್ವತಿ ಏನಾದರೂ ನೆಪ ಹೇಳಿಕೊಂಡು ಯಾರಿಗೋ ಹುಷಾರಿಲ್ಲವೆಂದೋ, ಮದುವೆಗೆ ಹೋಗಬೇಕೆಂದೋ, ಡಾಕ್ಟರ್‌ಗೆ ತೋರಿಸಿಕೊಳ್ಳಬೇಕೆಂದೋ ಕಾರಣ ನೀಡುತ್ತಿದ್ದಳು. ಅಂದು ಇಬ್ಬರೂ ಊರಿಗೆ ಬರುತ್ತಿರಲಿಲ್ಲ.

ಒಮ್ಮೆ ಯಾವುದೋ ಆಫೀಸ್ ಕೆಲಸಕ್ಕೆಂದು ಗಂಗಾಧರ ಬೆಂಗಳೂರಿಗೆ ಹೋದ. ಮರುದಿನವೇ ಸರಸ್ವತಿ, 'ಮುಂದಿನ ವಾರ ನಮ್ಮ ಚಿಕ್ಕಮ್ಮನ ಮಗಳು ಮದುವೆ ಶಾಪಿಂಗ್ ಮಾಡಬೇಕೂಂತ ಫೋನ್ ಮಾಡಿದ್ದಾಳೆ. ನಾನು ಒಂದು ವಾರ ರಜಾ ಹಾಕಿ ಹೋಗ್ತಿದ್ದೀನಿ. ಮೇಷ್ಟ್ರು ಬಂದ ಮೇಲೆ ಹೇಳಿ'.

'ಮದುವೆಗೆ ನಮ್ಮನ್ನು ಕರೆಯಲ್ವಾ?'

'ಮೈಸೂರಲ್ಲೇ ಮದುವೆ ಆಗಿದ್ದಿದ್ರೆ ಕರೆಯುತ್ತಿದ್ದೆ. ಮದುವೆ ನಡೆಯುತ್ತಿರುವುದು ತಿರುಪತಿಯಲ್ಲಿ. ಬರುವುದಾದರೆ ಬನ್ನಿ'.

ಶಾರದೆ ಸುಮ್ಮನಾಗಿದ್ದಳು. ಸರಸ್ವತಿ ವಾಪಸ್ಸು ಬಂದಾಗ ಅವಳ ಕುತ್ತಿಗೆಯಲ್ಲಿ ಕರಿಮಣಿಯಿತ್ತು.

'ಇದೇನು ಮೇಡಂ? ಮದುವೆ ನಿಮ್ಮದಾ, ನಿಮ್ಮ ಚಿಕ್ಕಮ್ಮನ ಮಗಳದ್ದಾ? ನೀವು...'

'ಸೇಫ್ಟಿ ದೃಷ್ಟಿಯಿಂದ ಕರಿಮಣಿ ಹಾಕಿಕೊಂಡಿದ್ದೀನಿ ಶಾರದಮ್ಮ. ಸಿಂಗಾನಲ್ಲೂರ್‌ನಲ್ಲಿ ನಮ್ಮ ಸ್ಟಾಫ್ ಸರಿಯಾಗಿಲ್ಲ. ಏನೇನೋ ಮಾತಾಡ್ತಿದ್ದಾರೆ. ಅದಕ್ಕೆ ಮದುವೆ ಆಯ್ತೂಂತ ಹೇಳಿಬಿಡ್ತೀನಿ'.

'ನಿಮ್ಮ ಯಜಮಾನರು ಎಲ್ಲೀಂತ ಕೇಳಿದರೆ ಏನು ಹೇಳ್ತೀರಾ?'

'ನಮ್ಮನೆಯವರು ಕೋಲ್ಕತ್ತಾದಲ್ಲಿ ಬಿಸಿನೆಸ್‌ಮೆನ್. ಅವರಿಗೆ ಆಡಂಬರದ ಮದುವೆ ಇಷ್ಟವಿಲ್ಲ. ತಿರುಪತಿಯಲ್ಲಿ ಮದುವೆ ಆಯ್ತೂಂತ ಹೇಳ್ತೀನಿ'.

'ಅವರು ಫೋಟೊ ಕೇಳಲ್ವಾ?'

'ಈ ಫೋಟೊ ನೋಡಿ' ಅವಳು ಮೊಬೈಲ್‌ನಲ್ಲಿದ್ದ ಫೋಟೊ ತೋರಿಸಿದ್ದಳು.

'ಅರೇ, ನಿಜವಾಗಿ ಮದುವೆಯಾಗಿದ್ದೀರ?'

'ನಮ್ಮ ಚಿಕ್ಕಮ್ಮನ ಮಗಳು ನನ್ನ ತರಹವೇ ಇದ್ದಾಳೆ. ನಮ್ಮ ಸ್ಟಾಫ್ ನಂಬ್ತಾರೆ ಬಿಡಿ ಶಾರದಮ್ಮ' ಎಂದಿದ್ದಳು.

ನಂತರ ಸರಸ್ವತಿ ಗಂಗಾಧರನ ತಂದೆ–ತಾಯಿಗೆ ಬಹಳ ಉಪಚಾರ ಮಾಡಲಾರಂಭಿಸಿದ್ದಳು. ಅವರು ಹಳ್ಳಿ ಬಿಟ್ಟು ಕೊಳ್ಳೇಗಾಲದಲ್ಲಿ ಬಂದಿರುವಂತೆ ಮಾಡಿದ್ದಳು. ಗಂಗಾಧರನ ತಾಯಿಗೆ ಗೌರಿಹಬ್ಬಕ್ಕೆ ಕಾಂಜೀವರಂ ಸೀರೆ, ಯುಗಾದಿಗೆ ಒಂದು ಜೊತೆ ಬಳೆ, ಎರಡೆಳೆಯ ಅವಲಕ್ಕಿ ಚೈನ್ ಮಾಡಿಸಿಕೊಟ್ಟಿದ್ದಳು. ಅವರಿಗೆ ತುಂಬಾ ಖುಷಿಯಾಗಿತ್ತು.

ಆರು ವರ್ಷ ಕಳೆದಿತ್ತು. ಮಕ್ಕಳೀಗ ದೊಡ್ಡವರಾಗಿದ್ದರು. ಶಿವು ಮೈಸೂರಿನಲ್ಲಿ ಎಂಜಿನಿಯರಿಂಗ್ ಓದುತ್ತಿದ್ದ. ರಾಜೇಶ ಎರಡನೇ ವರ್ಷದ ಪಿ.ಯು.ಸಿ.ಯಲ್ಲಿದ್ದ. ಗಂಗಾಧರ ಅವರನ್ನು ಸರಸ್ವತಿಪುರಂನಲ್ಲಿ ಚಿಕ್ಕ ಮನೆ ಮಾಡಿ ಇರಿಸಿದ್ದ. ಗಂಗಾಧರನ ದೊಡ್ಡಮ್ಮನ ಮಗಳು ವಿಧವೆ ಶಂಕರಕ್ಕ, ಆ ಹುಡುಗರಿಗೆ ಅಡುಗೆ ಮಾಡಿಕೊಂಡಿದ್ದರು. ಕಲ್ಯಾಣಿ ಆರನೇ ತರಗತಿಯಲ್ಲಿದ್ದಳು.

ಈ ಮಧ್ಯೆ ಗಂಗಾಧರನ ಕುಟುಂಬದಲ್ಲಿ ಕೆಲವು ಬದಲಾವಣೆಗಳಾಗಿದ್ದವು. ಅನಿರೀಕ್ಷಿತವಾಗಿ ಸರಸ್ವತಿಗೆ ಮೈಸೂರಿನ ಶಾಲೆಗೆ ವರ್ಗವಾಗಿತ್ತು. ಅವಳು ಕೊಳ್ಳೇಗಾಲ ಬಿಟ್ಟು ಹೋಗಲು ತುಂಬಾ ಅತ್ತಿದ್ದಳು. 'ನಾನು ಟ್ರಾನ್ಸ್‌ಫರ್‌ಗೆ ಪ್ರಯತ್ನವೇ ಪಟ್ಟಿರಲಿಲ್ಲ. ಅಂಥದ್ರಲ್ಲಿ ಮೈಸೂರಿಗೆ ಹೇಗೆ ವರ್ಗವಾಗಲು ಸಾಧ್ಯ?' ಎಂದು ಹಲುಬಿದ್ದಳು. ಕೆಲವು ದಿನಗಳ ನಂತರ ಶಾರದೆಗೆ ಸರಸ್ವತಿಯ ವರ್ಗಾವಣೆಯಲ್ಲಿ ಗಂಡನ ಕೈವಾಡವಿದೆಯೆಂದು